ಸಿರ್ಸಿ ಸಿದ್ದಾಪುರ ತಾಲ್ಲೂಕಿನಲ್ಲಿ ಸರ್ಕಾರಿ ಜಮೀನನ್ನು ಅನಧಿಕೃತ ಸಾಗುವಳಿ ಮಾಡಿದ ವಿವರ ಈ ಕೆಳಗಿನಂತಿದೆ:

	ಸಿರ್ಸಿ	ಸಿದ್ದಾಪುರ
	ಎ.ಗುಂ.	ಎ.ಗುಂ.
೧) ಅತಿಕ್ರಮಣ ಮಾಡಿರುವ ಕ್ಷೇತ್ರ	೫೧–೧೫ (೨೩ಜನ)	೨೪–೩೩ (೧೭ ಜನ)
೨) ಸಕ್ರಮ ಮಾಡಿರುವ ಕ್ಷೇತ್ರ	೫೧–೧೫	೨೪–೩೩

ಸರ್ಕಾರಿ ಸುತ್ತೋಲೆ ಕ್ರ : ಆರ್‌ಡಿ ೧೦೫ ಎಲ್‌ಜಿಪಿ ೭೭ ದಿನಾಂಕ ೧೯-೭-೭೭ ಮತ್ತು ಕ್ರ :ಆರ್‌ಡಿ ೫೨ ಎಲ್‌ಜಿಪಿ ೮೧ ದಿನಾಂಕ ೬-೮-೮೧ ಅಲ್ಲದೇ ಕ್ರ ; ಆರ್‌ಡಿ ೨೭೦ ಎಲ್‌ಜಿಪಿ ೮೧ ದಿನಾಂಕ ೨೭-೩-೮೧ರ ಪರಿಮಿತಿಯಲ್ಲಿ ಬರುವ ಎಲ್ಲ ಪ್ರಕರಣಗಳನ್ನು ಸಕ್ರಮ ಮಾಡಿದ್ದು. ಸದರಿ ಸುತ್ತೋಲೆ ಪರಿಮಿತಿಗೆ ಬಾರದ ಪ್ರಕರಣಗಳನ್ನು ಸಕ್ರಮಗೊಳಿಸುವ ಬಗ್ಗೆ ಕಾಯ್ದೆಗೆ ಸೂಕ್ತ ತಿದ್ದುಪಡಿ ಹೊರಡಿಸುವ ಕರಡು ಕಾಯ್ದೆ ಸರ್ಕಾರದ ಪರಿಶೀಲನೆಯಲ್ಲಿದೆ.

ಈ ವಿಷಯ ಸೆಲೆಕ್ಟ್ ಕಮಿಟಿ ಮುಂದೆ ಇದೆ. ಬಿಲ್ ಇದೆ. ಆದು ಪಾಸ್ ಆದಮೇಲೆ ಅವರನ್ನು ರೆಗ್ಯುಲರೈಸ್ ಮಾಡುತ್ತೇವೆ.

ಶ್ರೀ ಜಿ. ಎಂ. ಕಾನಡೆ.—ಅವರನ್ನು ಹೊರಗೆ ಹಾಕುವುದಿಲ್ಲ ಎಂದು ತಾವು ಹೇಳಿದಿರಿ. ಅವರಿಗೆ ಒಂದು ಗುಂಟೆಗೆ ಎಷ್ಟು ರೂಪಾಯಿ ಎಂದು ಫಿಕ್ಸ್ ಮಾಡುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಇದನ್ನು ನಾಮಿನಲ್ಲಾಗಿ ಮಾಡಬೇಕೆಂದು ಇದೆ. ಆ ಎಲ್ಲಾ ವಿವರ ಬಿಲ್‌ನಲ್ಲಿ ಇದೆ.

ಶ್ರೀ ಜಿ.ಎಂ, ಕಾನಡೆ.—ಈಗ ೫೦೦ ರೂಪಾಯಿಗಳನ್ನು ಕಟ್ಟಬೇಕೆಂದು ಅವರಿಗೆ ನೋಟೀಸ್ ಕೊಟ್ಟಿದ್ದಾರೆ. ಬೀಡಿ ಕಟ್ಟುವ ಕಾರ್ಮಿಕರು ಅಲ್ಲಿ ಇದ್ದು ಅವರು ಇಷ್ಟು ಹಣವನ್ನು ಎಲ್ಲಿಂದ ತಂದು ಕಟ್ಟುತ್ತಾರೆ ? ಗುಂಟೆಗೆ ೧೦–೧೫ ರೂಪಾಯಿಗಳು ಎಂದು ಮಾಡಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರನ್ನು ಹೊರಗೆ ಹಾಕುವುದಿಲ್ಲ. ಮುಂದೆ ಪಾಸ್ ಆಗುವಾಗ ಈ ಎಲ್ಲಾ ವಿಷಯಗಳನ್ನು ಗಮನಕ್ಕೆ ತೆಗೆದುಕೊಳ್ಳುತ್ತೇವೆ. ಫ್ರೀ ಆಗಿಯೇ ಕೊಡಬೇಕೇ ಎಂಬುದೂ ಸೆಲೆಕ್ಟ್ ಕಮಿಟಿ ಮುಂದೆ ಇದೆ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡಿದ್ದೇವೆ. ಫ್ರೀಯಾಗಿ ಕೊಡಬೇಕೇ, ನಾಮಿನಲ್ ಪ್ರೈಸ್‌ನಲ್ಲಿ ಕೊಡಬೇಕೇ, ಹೆಚ್ಚು ಇರುವವರಿಗೆ ಹೆಚ್ಚು ಹಣ ಪಡೆದುಕೊಳ್ಳಬೇಕೇ ಎಂಬುದೆಲ್ಲಾ ಇದೆ. ಬಿಲ್ ಪಾಸ್ ಆಗುವವರೆಗೆ ವಸೂಲಿ ಮಾಡಬಾರದು, ಅವರನ್ನು ಹೊರಗೆ ಹಾಕಬಾರದು ಎಂದು ತಿಳಿಸುತ್ತೇವೆ.

ಶ್ರೀ ಜಿ. ಎಂ. ಕಾನಡೆ.—ಸಿರಸಿಯ ವಿವೇಕಾನಂದ ನಗರದಲ್ಲಿ ಸರ್ವೇ ನಂ. ೧೫೦ಬಿ, ೪೫ಬಿ ಯಲ್ಲಿ ೪೦೦ ಮನೆಗಳಿದ್ದು ೨೫ ವರ್ಷಗಳಿಂದ ವಾಸವಾಗಿದ್ದಾರೆ. ಹಿಂದೆ ಸಿಂಧ್ಯಾ ಅವರು ಅಲ್ಲಿಗೆ ಬಂದಿದ್ದಾಗ ಡಿ.ಸಿ.ಯವರನ್ನು ಕರೆಯಿಸಿ ಇದನ್ನು ರೆವಿನ್ಯೂ ಇಲಾಖೆಗೆ ವಹಿಸಬೇಕು ಎಂದೂ ಸಹಾ ಹೇಳಿದ್ದಾರೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಗಮನಿಸಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದನ್ನು ನೋಡುತ್ತೇನೆ.

ವಿದ್ಯಾರ್ಥಿಗಳ ಹಾಸ್ಟೆಲ್ ಬಗ್ಗೆ

೧೦೬ (೧೭೭೧) ಪಿ. ಬಿ. ಓಂಕಾರಮೂರ್ತಿ (ಕಡೂರು).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕಡೂರು ತಾಲ್ಲೂಕಿನ ಚಳಿಹಿರಿಯೂರು ಪಂಚನಹಳ್ಳಿ ಮತ್ತು ಯಗಟಿ ಗ್ರಾಮಗಳಲ್ಲಿ ಸರ್ಕಾರಿ ಕಿರಿಯ ಕಾಲೇಜುಗಳು ಇದ್ದು ಅಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯದ ಸೌಲಭ್ಯ ಇಲ್ಲದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆಂಕೆ ?